- -                    ಓ ಎಸ್ ನಂ.135/2019

ಪಿ.ಡಬ್ಲ್ಯೂ :1

ದಿನಾಂಕ :05-08-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಸರ್ವೆ ನಂ. 18/5 ನೇ ಸ್ವತ್ತಿನ ಸಂಬಂಧ ಈ ದಾವೆ ಸಲ್ಲಿಸಿದ್ದೇನೆ . ಸರ್ವೆ ನಂ. 18 ರಲ್ಲಿ ಒಟ್ಟು 4 ಎಕರೆ 37 ಗುಂಟೆ ಸ್ವತ್ತು ಇರುತ್ತದೆ . ಹಲವು ವರ್ಷಗಳ ಹಿಂದೆಯೇ ಸರ್ವೆ ನಂ. 18 ಪೋಡಿಯಾಗಿರುತ್ತದೆ . ಸರ್ವೆ ನಂ. 18/5 ನೇ ಸ್ವತ್ತು ನನ್ನ ಮುತ್ತಜ್ಜಿ ಕಾಳಮ್ಮ ನವರ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ . ದಾವಾ ಸ್ವತ್ತು ನಮ್ಮ ಮತ್ತು ಕಾಳಮ್ಮ ನವರ ಕುಟುಂಬದ ಸ್ವತ್ತಲ್ಲ ಎಂದರೆ ಸರಿಯಲ್ಲ .

ಅರಿವೇಸಂದ್ರ ಗ್ರಾಮದಲ್ಲಿ ರಂಗಮ್ಮ ಕೋಂ ಸಿದ್ದನಂಜೇಗೌಡ ಎಂಬುವವರು ಇದ್ದರು ಎಂದರೆ ನನಗೆ ಗೊತ್ತಿಲ್ಲ . ದಾವಾ ಸ್ವತ್ತು ಸದರಿ ಮೂಲತಃ ಗಂಗಮ್ಮ ನವರಿಗೆ ಸೇರಿತ್ತು ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಮೂಲ ದಾಖಲೆಗಳು ಸದರಿ ಗಂಗಮ್ಮ ನವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಅವರ ಹೆಸರಿಗೆ ಸೃಷ್ಟಿಸಿಕೊಂಡಿದ್ದಾರೆ ಅವರು ಪಟೇಲರಾಗಿ ಕೆಲಸ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ . ಗಂಗಮ್ಮ ನವರ ಹೆಸರಿನಲ್ಲಿ ದಾವಾ ಸ್ವತ್ತಿನ ದಾಖಲೆಗಳು ಇವೆ ಎಂಬುದರ ಸಂಬಂಧ ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ, ಒಂದು ಕೈ ಬರಹದ ಪಹಣಿಯಲ್ಲಿ ತಡೆಯಿದೆ ಎಂಬುದಾಗಿ ನಮೂದು ಇದೆ ಎಂದು ತಿಳಿಸಿದ್ದಾರೆ . ಸದರಿ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಅದು ನನ್ನ ಬಳಿ ಇರುತ್ತದೆ . ಗಂಗಮ್ಮ ನವರಿಗೆ ಹುಚ್ಚೇಗೌಡ , ಮುದ್ದೇಗೌಡ , ನಿಂಗೇಗೌಡ , ರುದ್ರೇಗೌಡ ಮತ್ತು ಬಸವೇಗೌಡ ಎಂಬ ಐದು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ . ಸದರಿ ಬಸವೇಗೌಡ ನವರಿಗೆ 1 ನೇ ಪ್ರತಿವಾದಿ ಕಾಳೇಗೌಡ , ರುದ್ರಣ್ಣ ಮತ್ತು ಈಶ್ವರಯ್ಯ ಎಂಬ ಮೂವರು ಮಕ್ಕಳು ಎಂದರೆ ಸಾಕ್ಷಿಯು ಕಾಳೇಗೌಡ , ರುದ್ರಮ್ಮ ಮತ್ತು ಈಶ್ವರಯ್ಯ ಎಂಬ ಮೂವರು ಮಕ್ಕಳಿದ್ದಾರೆ ಎಂದು ತಿಳಿಸಿದ್ದಾರೆ . ಮೇಲೆ ಹೇಳಿದ ಗಂಗಮ್ಮ ನವರು 1 ನೇ ಪ್ರತಿವಾದಿಯ ಅಜ್ಜಿ ಎಂದರೆ ನನಗೆ ಗೊತ್ತಿಲ್ಲ . ಗಂಗಮ್ಮ ಮರಣ ಹೊಂದಿ ಬಹಳ ವರ್ಷವಾಗಿದೆ ಎಂದರೆ ನನಗೆ ಗೊತ್ತಿಲ್ಲ . ಗಂಗಮ್ಮ ನವರ ಮರಣ ನಂತರ ಅವರ ಐದು ಜನ ಮಕ್ಕಳು ದಾವಾ ಸ್ವತ್ತಿನ ಮಾಲೀಕರು ಮತ್ತು ಸ್ವಾಧೀನದಾರರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಐದು ಜನರು ತಮ್ಮ

ಕುಟುಂಬದ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದು ಅದರಲ್ಲಿ ದಾವಾ ಸ್ವತ್ತು ಬಸವೇಗೌಡ ರವರ ಭಾಗಕ್ಕೆ ಬಂದಿದೆ ಎಂದು ಸಾಕ್ಷಿಯು ಅದು ನಮ್ಮ ಸ್ವತ್ತು ಅವರಿಗೆ ಭಾಗ ಬರುವುದಿಲ್ಲ ಎಂದು ತಿಳಿಸಿದ್ದಾರೆ . ಸ್ವತ್ತುಗಳನ್ನು ವಿಭಾಗಿಸಿಕೊಂಡ ನಂತರ ಬಸವೇಗೌಡ ಮತ್ತು ಅವರ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ, ನಾವೆ ಇದ್ದೇವೆ ಎಂದು ಸಾಕ್ಷಿ ತಿಳಿಸಿದ್ದಾರೆ . ದಾವಾ ಸ್ವತ್ತು 1 ನೇ ಪ್ರತಿವಾದಿ ಮತ್ತು ಅವರ ಸಹೋದರರು ಮಾಡಿಕೊಂಡ ವಿಭಾಗದಲ್ಲಿ 1ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ, ದಾಖಲೆ ಸೃಷ್ಟಿಸಿಕೊಂಡಿದ್ದಾರೆ ಎಂದು ಸಾಕ್ಷಿ ತಿಳಿಸಿದ್ದಾರೆ . ವಿಭಾಗದ ಪ್ರಕಾರ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ ದಾಖಲಾಗಿದೆ ಎಂದರೆ ಸಾಕ್ಷಿಯು ದಾಖಲೆ ಸೃಷ್ಟಿಸಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ, ನಾವೇ ಇದ್ದೇವೆ ಎಂದು ಸಾಕ್ಷಿ ಹೇಳಿದ್ದಾರೆ . 1 ನೇ ಪ್ರತಿವಾದಿ ಮತ್ತು ಅವರು ಮಕ್ಕಳು ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆದಿದ್ದರು ಎಂದರೆ ಸರಿಯಲ್ಲ , ನಾವೆ ಬೆಳೆ ಬೆಳೆದಿದ್ದೇವೆ ಎಂದು ಸಾಕ್ಷಿ ತಿಳಿಸಿದ್ದಾರೆ .

ಸರ್ವೆ ನಂ. 18/5 ರಲ್ಲಿ 10 ಗಂಟೆ ಸ್ವತ್ತನ್ನು ಹೇಮಾವತಿ ಚಾನೆಲ್ ಗೆಂದು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ . ಅದರ ಸಂಬಂಧ ನೀಡಲಾದ ಪರಿಹಾರದ ಹಣವನ್ನು 1 ನೇ ಪ್ರತಿವಾದಿ ಪಡೆದಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ . ಭೂಸ್ವಾಧೀನದ ಸಂಬಂಧ ನೀಡಲಾದ ಪರಿಹಾರ ಕಡಿಮೆ ಇದೆ ಎಂದು 1 ನೇ ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ಎಲ್ ಎ ಸಿ ಪ್ರಕರಣ ದಾಖಲಿಸಿದ್ದರು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ . ಸರ್ವೆ ನಂ. 18/5 ರಲ್ಲಿ ಉತ್ತರ ದಿಕ್ಕಿನಲ್ಲಿ 31 1/2 ಗುಂಟೆ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ . ಅದೇ ಕಾರಣಕ್ಕೆ ದಾವೆ ಸಲ್ಲಿಸಿದ್ದೇವೆ ಎಂದು ಸಾಕ್ಷಿ ಹೇಳಿದ್ದಾರೆ . ರಾಷ್ಟ್ರೀಯಾ ಹೆದ್ದಾರಿ 206 ಪೂರ್ವ ಪಶ್ಚಿಮವಾಗಿದೆ ಎಂದರೆ ಸರಿ . ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸರ್ವೆ ನಂ. 18/5 ರ ಸಂಬಂಧ 1 ನೇ ಪ್ರತಿವಾದಿಯ ಹೆಸರನ್ನು ತೋರಿಸಲಾಗಿದೆ ಎಂದರೆ ಸಾಕ್ಷಿಯು ನಮ್ಮ ಕುಟುಂಬದ ಒಬ್ಬರ ಹೆಸರನ್ನು ಕೈಬಿಟ್ಟು ಅವರ ಹೆಸರನ್ನು ತೋರಿಸಲಾಗಿದೆ ಎಂದು ತಿಳಿಸಿದ್ದಾರೆ . ರಸ್ತೆಗೆಂದು ಭೂಸ್ವಾಧೀನ ಪಡಿಸಿಕೊಳ್ಳಲಾದ ಸ್ವತ್ತಿಗೆ ಸಂಬಂಧಿಸಿ 1 ನೇ ಪ್ರತಿವಾದಿಗೆ ಪರಿಹಾರ ಹಣ ನೀಡಲಾಗಿದೆ ಎಂದರೆ ಸಾಕ್ಷಿಯು ನಾನು ತಕರಾರು ಅರ್ಜಿ ಸಲ್ಲಿಸಿದ್ದೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲ , 1ನೇ ಪ್ರತಿವಾದಿಗೆ ಸರ್ಕಾರದಿಂದ ಪರಿಹಾರದ ಹಣ

ದೊರೆಯುತ್ತದೆ ಎಂಬ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ -1 ರ ದಾಖಲೆಯು ಓದಲು ಸಾಧ್ಯವಾಗದ ದಾಖಲೆ ಎಂದರೆ ಸಾಕ್ಷಿಯು ಅದು ಬ್ರಿಟೀಷರ ಕಾಲದ ಒಂದನೇ ಖೇತವಾಲ್ ಪತ್ರಿಕೆ ಎಂದು ಸಾಕ್ಷಿ ಹೇಳಿದ್ದಾರೆ . ನಿಪಿ -1 ರ ವಿವರಗಳಿಗೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಿಪಿ -9 ರ ದಾಖಲೆಯನ್ನು ಯಾವಾ ಕಾರಣಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯ ಸರ್ವೆ ನಂ. 17 ರ ಸ್ವತ್ತಿನ ಉತ್ತರ ದಿಕ್ಕಿಗಿರುವ ಸ್ವತ್ತು ನಮ್ಮದು ಎಂದು ತೋರಿಸಲು ಹಾಜರುಪಡಿಸಿದ್ದೇನೆ ಎಂದು ತಿಳಿಸಿದ್ದಾರೆ . ಸರ್ವೆ ನಂ. 17 ರ ಪಶ್ಚಿಮದ ಸ್ವತ್ತನ್ನು ನಿಪಿ -9 ರ ಕ್ರಯದಾರರು ಖರೀದಿಸಿದ್ದಾರೆ . ನಿಪಿ -9 ರಲ್ಲಿ ತಿಳಿಸಿರುವ ಸ್ವತ್ತಿನ ಪೂರ್ವ ಕ್ಕೆ 1 ನೇ ಪ್ರತಿವಾದಿಯ ತಂದೆ ಬಸವೇಗೌಡ ರವರ ಸ್ವತ್ತು ಇದೆ ಎಂದರೆ ಸರಿ . ಈಗ ಹೇಳಿದ ಬಸವೇಗೌಡರ ಸ್ವತ್ತಿನ ಉತ್ತರಕ್ಕೆ ದಾವಾ ಸ್ವತ್ತು ಇದೆ ಎಂದರೆ ಸರಿ . ಸರ್ವೆ ನಂ. 17 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ. 17 ರಲ್ಲಿ ಒಟ್ಟು 5 ಎಕರೆ 4 ಗುಂಟೆ ಸ್ವತ್ತು ಇದೆ ಎಂದರೆ ಸರಿ . ಸದರಿ 5 ಎಕರೆ 4 ಗುಂಟೆ ಸ್ವತ್ತಿನಲ್ಲಿ ಗಂಗಮ್ಮ ನವರು 2 ಎಕರೆ 22 ಗುಂಟೆ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಸರಿ . ಸದರಿ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ 17 ರಲ್ಲಿ ಉಳಿದ ಸ್ವತ್ತು 1 ನೇ ಪ್ರತಿವಾದಿಯ ಸ್ವತ್ತು ಎಂದರೆ ಸರಿ . ಸದರಿ 1 ನೇ ಪ್ರತಿವಾದಿಯ ಸ್ವತ್ತಿನ ಉತ್ತರಕ್ಕೆ ಸರ್ವೆ ನಂ. 18/5 ರ ಸ್ವತ್ತು ಇದೆ ಎಂದರೆ ಸರಿಯಲ್ಲ , ಅಲ್ಲಿ ನಮ್ಮ ಸ್ವತ್ತು ಇದೆ ಎಂದು ಸಾಕ್ಷಿ ಹೇಳಿದ್ದಾರೆ.

ಸರ್ವೆ ನಂ. 17 ಮತ್ತು 18/5 ಒಂದೇ ಚಕ್ಕುಬಂದಿಯೊಳಗೆ ಉತ್ತರ ದಕ್ಷಿಣವಾಗಿ ಉದ್ದಕ್ಕಿರುವ ಸ್ವತ್ತು ಎಂದರೆ ಸರಿಯಲ್ಲ . ದಾವಾ ಸ್ವತ್ತು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬಕ್ಕೆ ಸಂಬಂಧಿಸಿದ ಸ್ವತ್ತಾಗಿದ್ದು ಸದರಿ ಸ್ವತ್ತಿಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ, ಆದರೂ ಸಹಾ ಅದು ನಮ್ಮ ಸ್ವತ್ತು ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .